**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**
CC No.1128/2014

CW -1 PW - 1

| | | |
|---|---|---|
| ಹೆಸರು | ಃ | ಸುರೇಶ್ ಎನ್ |
| ತಂದೆಯ ಹೆಸರು | ಃ | ನಾರಾಯಣ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಪೊಲೀಸ್ ಇನ್ಸಪೆಕ್ಟರ್, ಸಿಐಡಿ |
| ವಾಸ | ಃ | ಬೆಂಗಳೂರು |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ **ದಿನಾಂಕ 27.10.2022**

ನಾನು 05.03.2014 ರಿಂದ 04.06.2016 ರವರೆಗೆ ಸಾತನೂರು ಠಾಣೆಯಲ್ಲಿ ಪಿಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 14.03.2014 ರಂದು ಸಂಜೆ 4.15 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ಬಾಬ್ತಿ ಬಂದ ವಿಚಾರ ಏನೆಂದರೆ ಕಾಳೇಗೌಡನದೊಡ್ಡಿಗ್ರಾಮದ ಬಸವರಾಜು ಎನ್ನುವವರು ತಮ್ಮ ಅಂಗಡಿಯ ಮುಂಭಾಗದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಬಾಬ್ತಿ ಬಂದಿದ್ದು, ಚಾಸಾ-2 ಮತ್ತು 3 ರವರಿಗೆ ಸದರಿ ಸ್ಥಳಕ್ಕೆ ಪಂಚರನ್ನು ಬರಮಾಡಿಕೊಂಡು ಬರುವಂತೆ ತಿಳಿಸಿರುತ್ತೇನೆ. ಆ ಮೇರೆಗೆ ಚಾಸಾ-5 ರಿಂದ 7 ರವರನ್ನು ಠಾಣೆಗೆ ಕರೆಸಿ ಅವರಿಗೆ ಮಾಹಿತಿ ನೀಡಿ ಅವರನ್ನು ನಮ್ಮೊಟ್ಟಿಗೆ ಸ್ಥಳಕ್ಕೆ ಕರೆದುಕೊಂಡು ಹೋದೆವು. ಕೆಎ-42-ಜಿ-74 ವಾಹನವನ್ನು ಚಾಸಾ-4 ರವರು ಚಲಾಯಿಸಿದ್ದು, ಸದರಿ ವಾಹನದಲ್ಲಿ ನಾವು ಸ್ಥಳಕ್ಕೆ ಹೋದೆವು. ಸಂಜೆ 5.15 ಗಂಟೆ ಸಮಯದಲ್ಲಿ ನಾವು ಸ್ಥಳಕ್ಕೆ ಹೋಗಿ ದಾಳಿ ಮಾಡಲಾಗಿ ಒಬ್ಬ ಅಸಾಮಿಯನ್ನು ವಶಕ್ಕೆ ಪಡೆದೆವು. ಆತನ ಹೆಸರು, ವಿಳಾಸ ವಿಚಾರಿಸಲಾಗಿ, ಬಸವರಾಜು @ ರಾಜಣ್ಣ ಬಿನ್ ಲೇಟ್ ಬಸವೇಗೌಡ ಎಂದು ತಿಳಿಸಿದ್ದು, ಆತನ ಬಳಿ ಇದ್ದ ಒಂದು ಬಾಕ್ಸ್ ನ್ನು ಪರಿಶೀಲಿಸಲಾಗಿ, ಸದರಿ ಬಾಕ್ಸ್ ನಲ್ಲಿ 180 ಎಂಎಲ್ ನ ಹೈವಾರ್ಡ ವಿಸ್ಕಿ 28 ಪ್ಯಾಕೇಟ್, 180 ಎಂಎಲ್ ಓಲ್ಡ್ ಟವರೀನ್ ವಿಸ್ಕಿ 8 ಪ್ಯಾಕೇಟ್, 90 ಎಂಎಲ್ ಹೈವಾರ್ಡ ವಿಸ್ಕಿ 48 ಪ್ಲಾಸ್ಟಿಕ್

ಬಾಟಲ್, 90 ಎಂಎಲ್ ನ ಓರಿಜಿನಲ್  ಚಾಯ್ಸ 12 ಪ್ಲಾಸ್ಟಿಕ್ ಬಾಟಲ್‌ಗಳನ್ನು ವಶಕ್ಕೆ ಪಡೆದಿದ್ದು, ಆ ಪೈಕಿ ಅವುಗಳಲ್ಲಿ ತಲಾ ಒಂದರಂತೆ ಎಫ್ ಎಸ್ ಎಲ್ ಪರೀಕ್ಷೆಗೆ ಕಳುಹಿಸಲು ಅಮಾನತು ಪಡಿಸಿಕೊಂಡು ಎಸ್ ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇನೆ. ನಂತರ ಆರೋಪಿ ಮತ್ತು ಮಾಲನ್ನು ವಶಕ್ಕೆ ಪಡೆದು, ಸದರಿ ಸ್ಥಳದಲ್ಲಿ ಸಂಜೆ 5.15 ಗಂಟೆಯಿಂದ 6 ಗಂಟೆಯವರೆಗೂ ಮಹಜರ್ ಕ್ರಮ ಜರುಗಿಸಿರುತ್ತೇನೆ.

ನಂತರ ಠಾಣೆಗೆ ಬಂದು ಸಂಜೆ 6.15 ಗಂಟೆ  ಮೊಕದ್ದಮೆ ಸಂಖ್ಯೆ 57/2014 ಕಲಂ 32, 34 ಕೆಇ ಆಕ್ಟ್ ಅಡಿಯಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ನಂತರ ವಶಕ್ಕೆ ಪಡೆದ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ದಸ್ತಗಿರಿ ಕ್ರಮ ಅನುಸರಿಸಿ, ಮಾನ್ಯ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ. ನ್ಯಾಯಾಲಯವು ಆರೋಪಿಯನ್ನು ಜೆಸಿಗೆ ರಿಮ್ಯಾಂಡ್ ಮಾಡಿರುತ್ತದೆ.

ಅದೇ ದಿನ ಪಂಚರು  ಮತ್ತು ಠಾಣಾ ಸಿಬ್ಬಂದಿಯವರ  ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿಃ11.04.2014 ರಂದು ಅಮಾನತು ಪಡಿಸಿಕೊಂಡ ಮಾಲಿಗಳನ್ನು  ಎಫ್ ಎಸ್ ಎಲ್ ಗೆ ಕಳುಹಿಸಿರುತ್ತೇನೆ. ದಿಃ22.04.2014 ರಂದು  ಉಳಿದ ಮಾಲುಗಳನ್ನು ಅಬಕಾರಿ ಇಲಾಖೆಗೆ ನೀಡಲು ಅಬಕಾರಿ ಅಧಿಕಾರಿಗಳಿಗೆ ಅನುಮತಿ ಪತ್ರ ನೀಡಿದ್ದೇನೆ. ದಿಃ03.05.2014 ರಂದು ಎಫ್ ಎಸ್ ಎಲ್ ಗೆ ಕಳುಹಿಸಿ ಉಳಿದ ಮಾಲುಗಳನ್ನು ಅಬಕಾರಿ ನಿರೀಕ್ಷಕರು, ಕನಕಪುರ ರವರಿಗೆ ನೀಡಿರುತ್ತೇನೆ.

ದಿಃ04.06.2014 ರಂದು ವರ್ಗಾವಣೆಯಾದ ಕಾರಣ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-9 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ಪ್ರ.ವ ವರದಿಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದ, ಪ್ರ.ವ ವರದಿಯನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು.  ಪಂಚನಾಮೆಯನ್ನು ನಿಪಿ-2 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.  ಸಾಕ್ಷಿಯು ಎಫ್ ಎಸ್ ಎಲ್ ಗಾಗಿ ತೆಗೆದ

ಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮ-1 ರಿಂದ 4 ಎಂದು ಗುರುತಿಸಲಾಯಿತು. ಅದರಲ್ಲಿನ ಸಾಕ್ಷಿಯ ಸಹಿಗಳನ್ನು ಮು.ಮ-1(ಎ) ಯಿಂದ 4(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು : ಆರೋಪಿ ಪರ ಎಜಿಆರ್ ವಕೀಲರಿಂದ</u>

ದಿ:14.03.2014 ರಂದು 4.15 ಸಮಯದಲ್ಲಿ ನನಗೆ ಮಾಹಿತಿ ಬಂತು. ಆ ದಿನ ಕೇವಲ ಆ ಸ್ಥಳದಲ್ಲಿ ಮಾತ್ರ ದಾಳಿ ಮಾಡಿದ್ದೇನೆ. ಠಾಣೆಯನ್ನು ಸಂಜೆ 5 ಗಂಟೆ ಸುಮಾರಿಗೆ ಬಿಟ್ಟೆವು. ಸ್ಥಳ 5 ಗಂಟೆಗೆ ಬಿಟ್ಟ ಬಗ್ಗೆ ದೂರಿನಲ್ಲಿ ನಮೂದು ಇಲ್ಲ. ಸ್ಥಳವನ್ನು 5.15 ಗಂಟೆಗೆ ತಲುಪಿದೆವು ಎಂದು ದೂರಿನಲ್ಲಿ ನಮೂದು ಇಲ್ಲ, ಆದರೆ ಪಂಚನಾಮೆಯಲ್ಲಿ ನಮೂದು ಇದೆ. ಕೇಸ್ ಡೈರಿಯಲ್ಲಿ ಆ ಬಗ್ಗೆ ನಮೂದು ಇದೆ. ಅದನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ. ಸ್ಟೇಷನ್ ಡೈರಿಯಲ್ಲಿ ಯಾರನ್ನು ಯಾವ ಸ್ಥಳದಲ್ಲಿ ಕರ್ತವ್ಯಕ್ಕೆ ನೇಮಿಸಲಾಗಿದೆ ಎಂದು ನಮೂದು ಇರುತ್ತದೆಂದರೆ ಸರಿ. ಆ ಬಗ್ಗೆ ಆ ದಿನದ ಸ್ಟೇಷನ್ ಡೈರಿಯನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿ.

ಪಂಚರಿಗೆ ನಾವು ನೊಟೀಸು ನೀಡಿರುವುದಿಲ್ಲ. ಘಟನಾ ಸ್ಥಳಕ್ಕೂ ನಮ್ಮ ಠಾಣೆಗೂ ಸುಮಾರು ಮೂರುವರೆ ಕಿ.ಮೀಟರ್ ಅಂತರವಿದೆ. ಸಾತನೂರಿನಿಂದ ಘಟನಾ ಸ್ಥಳಕ್ಕೆ 10 ಕಿ.ಮೀಟರ್ ಅಂತರವಿದೆ ಎಂದರೆ ಸರಿಯಲ್ಲ. ಸಾತನೂರಿನಿಂದ ಕನಕಪುರಕ್ಕೆ 15 ಕಿ.ಮೀಟರ್ ಇದೆ ಎಂದರೆ ಸರಿಯಲ್ಲ. ಸಾಕ್ಷಿ 10 ಕಿ.ಮೀಟರ್ ಇದೆ ಎಂದು ನುಡಿಯುತ್ತಾರೆ. ನಿಪಿ-2 ಕ್ಕೆ ಪಂಚರಾಗಿರುವ ಗೋಪಿ ಎನ್ನುವವರು ದಾಳಿಂಬ ಗ್ರಾಮದವರು ಎಂದರೆ ಸರಿ. ದಾಳಿಂಬ ಗ್ರಾಮಕ್ಕೂ ಕಾಳೇಗೌಡನದೊಡ್ಡಿ ಗ್ರಾಮಕ್ಕೂ 15 ಕಿ.ಮೀಟರ್ ಅಂತರವಿದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಸಂಬೇಗೌಡನದೊಡ್ಡಿ ಗ್ರಾಮಕ್ಕೂ ಸಾತನೂರು ಗ್ರಾಮಕ್ಕೂ 10-12 ಕಿ.ಮೀಟರ್ ಅಂತರವಿದೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಕಾಳೇಗೌಡನದೊಡ್ಡಿ ಗ್ರಾಮದ ಗ್ರಾಮಸ್ಥರನ್ನು ಪಂಚರಾಗಿ ಮಾಡಿಕೊಳ್ಳಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ಅಂಕಿಅಂಶಕ್ಕಾಗಿ ನಿಪಿ-2 ನ್ನು ಠಾಣೆಯಲ್ಲೇ ಸೃಷ್ಟಿಸಿ ಪಂಚರ ಸಹಿ ಪಡೆದಿದ್ದೇವೆಂದರೆ ಸರಿಯಲ್ಲ.

ಆರೋಪಿ ಅಂಗಡಿಯಲ್ಲಿ ಮದ್ಯ ಮಾರಾಟ ಮಾಡುತ್ತಿದ್ದು, ಅಂಗಡಿಗೆ ಸಂಬಂಧಿಸಿದಂತೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-2 ಕ್ಕೆ ಸಹಿ ಹಾಕಿರುವ ಮಲ್ಲೇಗೌಡ, ಕಾವೇರಪ್ಪ ಮತ್ತು ರವಿಕುಮಾರ್ ರವರು ನಮ್ಮ ಠಾಣಾ ಸಿಬ್ಬಂದಿಗಳು ಎಂದರೆ ಸರಿ. ಅವರು ನಮ್ಮ ಸಿಬ್ಬಂದಿಯಾದ ಕಾರಣ, ಸಹಾಯ ಮಾಡಲು ನಿಪಿ-2 ಕ್ಕೆ ಸಹಿ ಮಾಡಿದ್ದಾರೆಂದರೆ ಸರಿಯಲ್ಲ. ದಾಳಿ ಮಾಡಿ 180 ಎಂಎಲ್ ನ ಹೈವಾರ್ಡ್ಸ್ ವಿಸ್ಕಿ 28 ಪ್ಯಾಕೇಟ್, 180 ಎಂಎಲ್ ಓಲ್ಡ್ ಟವರೀನ್ ವಿಸ್ಕಿ 8 ಪ್ಯಾಕೇಟ್, 90 ಎಂಎಲ್ ಹೈವಾರ್ಡ್ಸ್ ವಿಸ್ಕಿ 48 ಪ್ಲಾಸ್ಟಿಕ್ ಬಾಟಲ್, 90 ಎಂಎಲ್ ನ ಓರಿಜಿನಲ್ ಚಾಯ್ಸ 12 ಪ್ಲಾಸ್ಟಿಕ್ ಬಾಟಲ್‌ಗಳನ್ನು ವಶಕ್ಕೆ ಪಡೆದಿಲ್ಲ, ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾವು ಯಾವುದೇ ದಾಳಿ ಮಾಡಿ ಮದ್ಯ ವಶಪಡಿಸಿಕೊಂಡಿಲ್ಲ, ಅಂಕಿಅಂಶಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಬೇರೆ ದಾಳಿಗಳಲ್ಲಿ ವಶಪಡಿಸಿಕೊಂಡ ಬಾಟಲ್ ಗಳು ನಿಮ್ಮ ಕಚೇರಿಯಲ್ಲಿ ಇರುತ್ತವೆಂದರೆ ಸಾಕ್ಷಿ ಅವುಗಳನ್ನು ಸಂಬಂಧಪಟ್ಟ ಇಲಾಖೆಯವರಿಗೆ ನೀಡಿರುತ್ತೇವೆಂದು ನುಡಿಯುತ್ತಾರೆ. ಬೇರೆ ಪ್ರಕರಣಗಳಲ್ಲಿ ವಶ ಪಡಿಸಿಕೊಂಡ ಬಾಟಲ್ ಗಳನ್ನು ಈ ಪ್ರಕರಣದಲ್ಲಿ ಬಳಸಿದ್ದೇವೆಂದರೆ ಸರಿಯಲ್ಲ. ಯಾವುದೇ ಬಾಟಲ್ ಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸಿಲ್ಲ, ನಾವೇ ಅವುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆಗಳನ್ನು ಪಡೆದಿಲ್ಲ, ಅಂಕಿಅಂಶಕ್ಕಾಗಿ ಹೇಳಿಕೆಗಳನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ಯಾವುದೇ ಸಾಕ್ಷಿ ನನ್ನ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ನಮಗೆ ಯಾವುದೇ ಮಾಹಿತಿ ಬಂದಿಲ್ಲ, ನಾವು ಯಾವುದೇ ದಾಳಿ ಮಾಡಿ ಮದ್ಯವನ್ನು ವಶಪಡಿಸಿಕೊಂಡಿಲ್ಲ, ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮು.ಮ-1 ರಿಂದ 4 ನ್ನು ಕೇಸಿಗಾಗಿ ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮು.ಮ-1 ರಿಂದ 4 ಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾವು ಸ್ದಳಕ್ಕೆ ಹೋಗಿ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ